(ಈ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಉಂಟಾಗಿರುವ ತೊಂದರೆ.

+ ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ 2.65ರಷ್ಟು ಇರುವಂಥ ಸಣ್ಣ ಕೈಗಾರಿಕೆಗಳು ದುಸ್ಥಿತಿ ಮತ್ತು ಗಂಭೀರ ಪರಿಸ್ಥಿತಿಯಲ್ಲಿವೆ. ಅದರಲ್ಲೂ ನಮ್ಮ ಜಿಲ್ಲೆಯ ಸಣ್ಣಕೈಗಾರಿಕೆಗಳ ದುಸ್ಥಿತಿಯನ್ನು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಸುಮಾರು 15 ಲಕ್ಷ ಜನರಿಗೆ ಜೀವನೋಪಾಯ ಮಾಡಿಕೊಡತಕ್ಕಂಥ ಕ್ಷೇತ್ರ ಇದಾಗಿದೆ. ಆದರೆ ಇದು ಇವತ್ತು ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಾಗಾಗಿದೆ. ಮೊದಲನೆಯದಾಗಿ, ಇರುವಂಥ ಕಾನೂನು ಕೂಡ 1936, 1942, 1953 ಮತ್ತೆ 1959ರಲ್ಲಿ ಮಾಡಿರುವಂಥಾದ್ದು. ಅದು ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟೋರೇಟ್ 1920ರಲ್ಲಿ ಬ್ರಿಟಿಷರು ಮಾಡಿದಂಥ ಕಾಯಿದೆ. ಇವತ್ತೂ ಕೂಡ ಆ ಕಾಯಿದೆಯ ಆಧಾರದ ಮೇಲೆ ಕಿರುಕುಳ ಕೊಡುತ್ತಿದ್ದಾರೆ. ಸುಮಾರು 32 ಸಂಸ್ಥೆಗಳನ್ನು ನಿರಂತರವಾಗಿ ತಪಾಸಣೆ ನೆಪದಲ್ಲಿ ಕಿರುಕುಳಕ್ಕೆ ಒಳಪಡಿಸುತ್ತಿದ್ದಾರೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಒಂದು ಸಮಗ್ರವಾದ ಕೈಗಾರಿಕಾ ನೀತಿಯನ್ನು ತರುವಂಥ ಅವಶ್ಯಕತೆ ಇದೆ. ಪೀಪಲ್ ಫ್ರೆಂಡ್ಲಿ ಕೈಗಾರಿಕಾ ನೀತಿಯನ್ನು ಮುಖ್ಯವಾಗಿ ತರಬೇಕಾಗಿದೆ. ಇದನ್ನು ತರುವಂಥ ಪ್ರಯತ್ನವನ್ನು ತಾವು ಮಾಡುತ್ತೀರೆಂಬ ವಿಶ್ವಾಸ ನನಗೆ ಇದೆ. ಆದರೆ ಇದನ್ನು ತರುವುದಕ್ಕೆ ಮುಂಚೆ ಅದನ್ನು ತರುವ ತನಕ ಈಗಿರುವಂಥ ಕೈಗಾರಿಕಾ ನೀತಿ ಬಗ್ಗೆ ವಿಶೇಷವಾಗಿ ತಮ್ಮ ಗಮನವನ್ನು ಸೆಳೆಯುತ್ತೇನೆ. ಇತ್ತೀಚೆಗೆ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯವರು ಆಟೋಮೊಬೈಲ್ ಸ್ಪ್ರಿಂಗ್ಸ್ ಎಂದು ಏನಿದೆ, ಅದನ್ನು ಖರೀದಿ ಮಾಡುವುದಕ್ಕೆ ಹತ್ತು ಕೋಟಿ ರೂಪಾಯಿ ಟರ್ನ್‌ಓವರ್ ಇದ್ದವರಿಂದ ಮಾತ್ರ ಖರೀದಿ ಮಾಡಬೇಕೆಂದು ನಿಗದಿ ಪಡಿಸಿದ್ದಾರೆ. ಇದರಿಂದಾಗಿ ಸುತ್ತಮುತ್ತ ನಮ್ಮ ಜಿಲ್ಲೆಯಲ್ಲಿರುವಂಥ 50 ಲಕ್ಷ ಟರ್ನ್‌ಓವರ್ ಮಾಡುವಂಥ ಸಂಸ್ಥೆಗಳು ಏನಿವೆ, ಅವರು ಅವಕಾಶ ವಂಚಿತರಾಗಿದ್ದಾರೆ. ಇಡೀ ಖರೀದಿ ಮಾಡುವ ಅವಕಾಶ ತಮಿಳುನಾಡು ರಾಜ್ಯದಲ್ಲಿರುವಂಥ ಸಂಸ್ಥೆಗಳಿಗೆ ಹೋಗುತ್ತದೆ. ಕರ್ನಾಟಕ ರಾಜ್ಯದ ಸಣ್ಣ ಕೈಗಾರಿಕಾ ಘಟಕಗಳಿಗೆ ಈ ಅವಕಾಶ ಇಲ್ಲದೆ, ಒಂದೇ ಒಂದು ಸ್ಪ್ರಿಂಗ್ ಸಹಿತ ಇವರಿಂದ ಖರೀದಿಯಾಗಿಲ್ಲ. ಇದರ ಜೊತೆಗೆ ಇವರು ಖರೀದಿ ಮಾಡಿದ ರೇಟನ್ನು ನೋಡಿದರೆ ಆಶ್ಚರ್ಯ ಆಗುತ್ತದೆ. ಒಂದು ಟನ್‌ಗೆ 32,400 ರೂಪಾಯಿಯಂತೆ ಅವರು ಅದನ್ನು ಖರೀದಿ ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯ ಘಟಕಗಳು 30.500 ರೂಪಾಯಿಗೇ ಸಪ್ಲೈ ಮಾಡುತ್ತಿದ್ದಾರೆ. ಇದರಿಂದ ಒಂದು ಟನ್ ಖರೀದಿಗೆ ಎರಡು ಸಾವಿರ ರೂಪಾಯಿ ವ್ಯತ್ಯಾಸವಾಯಿತು. ಅವರಿಗೆ ಸುಮಾರು ಮೂರು ಸಾವಿರ ಮೆಟ್ರಿಕ್ ಟನ್ ಸಾಮಗ್ರಿ ಬೇಕಾಗುತ್ತದೆ. ಅಲ್ಲಿಗೆ ಹೆಚ್ಚುವರಿಯಾಗಿ ಕೊಡುವ ಹಣ ಎಷ್ಟಾಯಿತು? ಎರಡು ಸಾವಿರ ರೂಪಾಯಿ ಅಂತರದಲ್ಲಿ ಇದನ್ನು ಇವರು ಖರೀದಿ ಮಾಡುವ ಅವಶ್ಯಕತೆ ಏನಿದೆ? ಇದರ ಬಗ್ಗೆ ಸಮಗ್ರವಾದ ತನಿಖೆ ನಡೆಸಬೇಕು ಮತ್ತು ಅಲ್ಲಿಯ ತನಕ ಈ ಖರೀದಿ ನೀತಿಯನ್ನು ಪುನರ್‌ಪರಿಶೀಲಿಸಿ ಕರ್ನಾಟಕದ ನಮ್ಮ ಘಟಕಗಳಿಗೆ ಈ ಅವಕಾಶ ಸಿಗುವಂತೆ ವಿಶೇಷ ಆದೇಶವನ್ನು ಹೊರಡಿಸಬೇಕೆಂದು ತಮ್ಮ ಮೂಲಕ ನಾನು

ಸಂಬಂಧಪಟ್ಟ ಮಾನ್ಯ ಮಂತ್ರಿಗಳಿಗೆ ಏನಂತಿ ಮಾಡಿಕೊಳ್ಳುತ್ತೇನೆ. ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯಿಂದ ಯಾವ ಘಟಕಗಳು ಆರಂಭವಾಗಿರುತ್ತವೋ ಅವುಗಳಿಗೆ ಕಾಯಕಲ್ಪ ಕೊಡುವ ಮತ್ತು ಪುನರ್ ವಸತಿ ವ್ಯವಸ್ಥೆ ಮಾಡುವ ಮೊದಲು, ಇವತ್ತು ಪೋಲೀಸ್ ಕಂಪ್ಲೇಂಟನ್ನು ಕೊಟ್ಟು ರಿಕವರಿಗೆ ಆದೇಶ ಕೊಡುವಂಥಾದ್ದು ನಿಮ್ಮ ಘಟಕಗಳಿಂದ ಮತ್ತು ಇಲಾಖೆಯಿಂದ ಆಗುತ್ತಾ ಇದೆ. ಇದಕ್ಕೆ ಅವಕಾಶ ಕೊಡಬೇಡಿ ಎನ್ನುವಂತಹ ಏನಂತಿಯನ್ನು ಮಾಡುತ್ತಿದ್ದೇನೆ. ವಿಶೇಷವಾಗಿ ಈ ಸಣ್ಣ ಘಟಕಗಳು ಎಂದರೆ, 100 ಹೆಚ್.ಪಿ.ವರೆಗೆ ಇರುವಂತಹ ಘಟಕಗಳು ಹಿಂದೆ ಹೆಚ್.ಟಿ.ವ್ಯಾಪ್ತಿಗೆ ಬರದೇ ಇದ್ದರೆ, ಇವತ್ತು 60 ಹೆಚ್.ಪಿ. ಘಟಕಗಳಿಗೂ ಅಳವಡಿಸುವಂತಹ ಕಾನೂನನ್ನು ಮಾಡಿದ್ದೀರಿ. ಇದರಿಂದ ಸಣ್ಣ ಘಟಕಗಳು ಕೂಡ 8 ಲಕ್ಷ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡುವಂತಹ ದುಸ್ಥಿತಿ ಬಂದಿದೆ. ಅಷ್ಟು ಮಾತ್ರವಲ್ಲ, ಪೊಲ್ಯೂಷನ್ ಬೋರ್ಡ್‌ಗಳು, ರಿಜಿಸ್ಟ್ರೇಷನ್ ಸಂದರ್ಭದಲ್ಲಿ ಅಥವಾ ಯಾವ ಸಂದರ್ಭದಲ್ಲಿ ತಪಾಸಣೆ ಮಾಡಬೇಕೋ ಅದನ್ನು ಬಿಟ್ಟು ಸೌಂಡ್ ಪೊಲ್ಯೂಷನ್‌ಗೆ 10 ಸಾವಿರ, ಇನ್ನೊಂದು ಪೊಲ್ಯೂಷನ್‌ಗೆ ಏಳು ಸಾವಿರ ಎಂದು ನಿಗದಿ ಮಾಡಿ, ನಿರಂತರವಾಗಿ ತೊಂದರೆ ಕೊಡುತ್ತಿದ್ದಾರೆ. ಇದಲ್ಲದೇ ಬ್ಯಾಲೆನ್ಸ್ ಷೀಟನ್ನು ಕೇಳುವಂಥಾದ್ದು ನಡೆಯುತ್ತಾ ಇದೆ. ಆದ್ದರಿಂದ ನಾನು ತಮ್ಮ ಮೂಲಕ ಏನಂತಿ ಮಾಡುವಂಥಾದ್ದು, ಖರೀದಿ ನೀತಿ ಬಗ್ಗೆ ಸ್ಪಷ್ಟವಾದ ನಿಯಮಗಳನ್ನು ಮಾಡಬೇಕು. ಮತ್ತು ಸ್ಥಳೀಯ ಘಟಕಗಳಿಗೆ ಖರೀದಿ ಮಾಡಲಿಕ್ಕೆ ಅವಕಾಶವಾಗುವ ನಿಟ್ಟಿನಲ್ಲಿ ತಾವು ಆದೇಶವನ್ನು ಹೊರಡಿಸಬೇಕೆಂಬ ವಿಶೇಷ ಏನಂತಿಯನ್ನು ತಮ್ಮ ಮೂಲಕ ಸರ್ಕಾರದವರಿಗೆ ಮಾಡಲಿಕ್ಕೆ ಇಚ್ಚಿಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಈ ವಿಷಯವನ್ನು ಸಣ್ಣ ಕೈಗಾರಿಕಾ ಮುಂತ್ರಿಗಳ ಗಮನಕ್ಕೆ ತರುತ್ತೇನೆ.

(ಉ) ಹಾಸನ ಫಸ್ಟ್ ಗ್ರೇಡ್ ಕಾಲೇಜಿನ ಆಟದ ಮೈದಾನದಲ್ಲಿ ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿ ಮನೆ ಕಟ್ಟುತ್ತಿರುವುದು.

+ ಶ್ರೀ ಕೆ.ಹೆಚ್.ಹನುಮೇಗೌಡ(ಹಾಸನ): ಸನ್ಮಾನ್ಯ ಅಧ್ಯಕ್ಷರೇ, ಹಾಸನದಲ್ಲಿ ಫಸ್ಟ್ ಗ್ರೇಡ್ ಕಾಲೇಜ್ ಇದೆ. ಇಲ್ಲಿ ಸುಮಾರು ಎರಡು - ಎರಡೂವರೆ ಸಾವಿರ ಬಾಲಕಿಯರು ಮತ್ತು ಬಾಲಕರು ವ್ಯಾಸಂಗ ಮಾಡುತ್ತಿದ್ದಾರೆ, ಈಗ್ಗೆ ನಾಲ್ಕು ವರ್ಷಗಳ ಹಿಂದೆ ಸುಮಾರು 15-20 ಜನ ಸೇರಿಕೊಂಡು ಫಸ್ಟ್ ಗ್ರೇಡ್ ಕಾಲೇಜು ಆಟದ ಮೈದಾನದಲ್ಲಿ 7-8 ಎಕರೆಯನ್ನು ವಶಪಡಿಸಿಕೊಂಡಿದ್ದಾರೆ. ಇದು ಸುಮಾರು 15-20 ಕೋಟಿ ರೂಪಾಯಿ ಬೆಲೆ ಬಾಳತಕ್ಕ ಪ್ರದೇಶ. ಇದನ್ನು ಒತ್ತುವರಿ ಮಾಡಿಕೊಂಡು ಆ ಜಾಗದಲ್ಲಿ ಈಗಾಗಲೇ ಮನೆ ಕಟ್ಟಿಕೊಂಡಿದ್ದಾರೆ. ಕಳೆದ ಮೂರು ದಿವಸದಲ್ಲಿ ಆ ಕಾಲೇಜು ಮೀಟಿಂಗ್‌ಗೆ ಹೋಗಿದ್ದಾಗ, ಅಲ್ಲಿಯ ಹುಡುಗರು ಧರಣಿ ಮಾಡುತ್ತೇವೆಂದು ಕುಳಿತಿದ್ದರು. ಅದಕ್ಕೆ